ಶ್ರೀ ಎ. ಎಲ್. ಪಾಟೀಲ್.—ಎಲ್ಲಿ ದೂರು ಬಂದಿವೆ ಅಲ್ಲಿ ತನಿಕೆ ಮಾಡಿ ಯೋಗ್ಯ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಹಂಜಿ ಶಿವಣ್ಣ.—ಶಿವಮೊಗ್ಗ ತರೀಕೆರೆ ಭದ್ರಾವತಿ ಇಷ್ಟು ಡಿವಿಜನ್ನುಗಳಲ್ಲಿ ಮರಮುಟ್ಟಿನ ದುರ್ವ್ಯವಹಾರ ಆಗಿದೆ. ಕೆಲವು ಎಜಂಟರು ಮರಮುಟ್ಟು ತೆಗೆದುಕೊಂಡು ನಮ್ಮ ಎದುರುಗಡೆ ಮಾರಾಟ ಮಾಡುತ್ತಾರೆ. ಇದನ್ನು ಕಂಡುಹಿಡಿದು ವಿಚಾರಣೆ ಮಾಡುತ್ತೀರಾ?

ಶ್ರೀ ಎ. ಎಲ್. ಪಾಟೀಲ್.—ಈ ಹಂಚಿಕೆಯ ಪದ್ಧತಿಯಲ್ಲಿ ಬದಲಾವಣೆ ಮಾಡುತ್ತಾ ಇದ್ದೇವೆ. ಕಂಪ್ಲೇಂಟ್ ಇದೆ ಎಂದು ತೋರಿಸಿಕೊಟ್ಟರೆ ಪರಿಶೀಲನೆ ಮಾಡಿ ಯೋಗ್ಯ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈಗ ಇರತಕ್ಕಂಥ ಪದ್ಧತಿಯಲ್ಲಿ ಲೋಪದೋಷಗಳು ಇವೆ ಎಂದು ಕಂಡು ಬಂದಿರುವುದರಿಂದ ತಾಲ್ಲೂಕಿನಲ್ಲಿ ಇರತಕ್ಕಂಥ ಸಂಬಂಧಪಟ್ಟ ಬಿ. ಡಿ. ಓ. ಆಗಲಿ, ಫಾರೆಸ್ಟ್ ಡಿಪಾರ್ಟ್‌ಮೆಂಟಿನ ಅಧಿಕಾರಿಯೇ ಆಗಲಿ, ಜವಾಬ್ದಾರಿಯುತ ಒಬ್ಬ ಗೆಜೆಟೆಡ್ ಅಧಿಕಾರಿಯವರ ಮುಖಾಂತರ ಮರಮುಟ್ಟು ಸಪ್ಲೈ ಮಾಡುವ ಹಾಗೆ ಏರ್ಪಾಡು ಮಾಡುವುದಕ್ಕೆ ಸಾಧ್ಯವೇ?

ಶ್ರೀ ಎ. ಎಲ್. ಪಾಟೀಲ್.—ಉತ್ತರ (ಸಿ) ನೋಡಿದರೆ ಗೊತ್ತಾಗುತ್ತದೆ. ಅದನ್ನು ಪೇರಿಫೈ ಮಾಡಿದೆ. ಇನ್‌ಸ್ಪೆಕ್ಟರ ಮತ್ತು ಬಿ. ಡಿ. ಓ. ಚೆಕ್ ಮಾಡಿದ್ದಾರೆ.

ಶ್ರೀ ಎಚ್. ಬಿ. ಜ್ವಾಲನಯ್ಯ.—ಹರಿಜನ ಗಿರಿಜನರಿಗೆ ಮನೆ ಕಟ್ಟಲು ಕೋಟ್ಯಾಂತರ ರೂಪಾಯಿ ಸರಕಾರ ಕೊಡುತ್ತಾ ಬಂದಿದೆ. ಆದರೆ ಸರಿಯಾದ ತಿಳುವಳಿಕೆ ಅವರಿಗೆ ಇಲ್ಲದೇ ಇರುವುದರಿಂದ 200 ಅಥವಾ 300 ರೂ. ಕೊಟ್ಟು ರಸೀದಿ ಪಡೆದು ಮರಮುಟ್ಟು ಬೇರೆಯವರಿಗೆ ಕೊಡುತ್ತಾರೆ. ಅವರು ಮನೆ ಕಟ್ಟಲಿಲ್ಲ. ಸಾಲಗಾರರು ಮಾತ್ರ ಆಗಿದ್ದಾರೆ. ಸ್ಯಾಂಪಲ್ ಪರೀಕ್ಷೆಗಾಗಿ ಎಲ್ಲಿ ಹಣ ಖರ್ಚ ಮಾಡಿದೆಯೋ ಅಂಥ ಎರಡು ಮೂರು ತಾಲ್ಲೂಕುಗಳಲ್ಲಿ ಈ ಕೆಲಸ ಸುಗಮವಾಗಿ ನಡೆದಿದೆಯೇ ಎಂಬುದನ್ನು ಪರಿಶೀಲನೆ ಮಾಡಲು ಒಂದು ಸಮಿತಿ ಮಾಡುತ್ತೀರಾ?

ಶ್ರೀ ಎ. ಎಲ್. ಪಾಟೀಲ್.—ಇದು ತೀರ ವಿಶಾಲವಾದ ಪ್ರಶ್ನೆಯಾಯಿತು.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಸರ್ಕಾರದವರು ಹರಿಜನ ಗಿರಿಜನರಿಗೆ ಮನೆಗಳನ್ನು ಕಟ್ಟಿ ಕೊಳ್ಳಲು ಕೊಡತಕ್ಕ ಮರದ ಪರ್ಮಿಟ್ಟುಗಳನ್ನು ಮರದ ವ್ಯಾಪಾರಿಗಳು ಅಲ್ಲೆ ಕಡಿಮೆ ಬೆಲೆಗೆ ಇವರಿಂದ ಕೊಂಡು ಅದನ್ನು ಬೇರೆಯವರಿಗೆ ಮಾರಾಟ ಮಾಡುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

Mr. SPEAKER.—The Hon. Minister has already answered the question.

Sri ABDUL KHUDDUS ANWAR.—In January 1970 some people drew about 1,000 c.ft. of material and disposed it of in Bhadravathi. About that I have given a complaint to the Forest Department. What action has the Government taken about it. At the same time will the Government arrange to draw this material through B.D.Os. and deliver it at the places where the Harijans or Girijans want to construct?

ಶ್ರೀ ಎ. ಎಲ್. ಪಾಟೀಲ್.—ಮಾನ್ಯ ಸದಸ್ಯರು ಕೇಳುತ್ತಿರುವ ಪ್ರಶ್ನೆ ಸಭೆಯ ಮುಂದಿರತಕ್ಕ ಪ್ರಶ್ನೆಗೆ ಸಂಬಂಧವಿಲ್ಲದ್ದು.

Supply of timber for House Building Purposes to Harijans and Girijans in Mysore and Coorg Districts

588. Sri N. LOKAYYA NAIK (Virajpet).—

Will the Minister for Social Welfare be pleased to state :—

(*a*) the number of applications for purchase of timber for house building purposes, received by the Government from the Harijans and

(SRI N. LOKAYYA NAIK)

Girijans of Mysore and Coorg Districts during the years 1966, 1967 and 1968 (Yearwise information may please be furnisted) ;

(*b*) the number of applications for purchase of timber sanctioned during the above three years ;

(*c*) the depot from which the timber was purchased ?

Sri V. L. PATIL (Minister for Social Welfare).—

(*a*) The number of applications requesting supply of timber for house building purposes during 1966, 1967 and 1968 is as follows :

Dist.	*1966-67*	*1967-68*	*1968-69*
Mysore	2,176	2391	2,142
Coorg	9	37	3
	2,185	2,428	2,145
(*b*) Mysore	1,539	1,375	1,020
Coorg	9	37	3
Total number of applications sanctioned.	1,548	1,412	1,023

(*c*) Timber was supplied to the applicants of Mysore District from Kollegal, Nanjangud Central depot, Erehalli Wood Yard depot, Hunsur and to the applicants of Coorg District from Kushalnagar depot.

ಶ್ರೀ ಎನ್. ಲೋಕಯ್ಯ ನಾಯಕ್.—ಈ ಹರಿಜನ ಗಿರಿಜನರಿಗೆ ಮರಗಳನ್ನು ಕೊಡತಕ್ಕ ಬಗ್ಗೆ ಕೊಡಲಾದ ಪರ್ಮಿಟ್‌ಗಳನ್ನು ಕೊಡಿಸಿ ಆ ಎರ್ನಾ ಮರದ ಸಾಮಾನುಗಳನ್ನೂ ಒಂದೇ ದಿನ 26 ಲಾರಿಗಳಲ್ಲಿ ಬೇರೆಯವರು ಕೊಂಡುಕೊಂಡು ಹೋಗುತ್ತಿದ್ದಾಗ ಅದನ್ನು ಇಲಾಖೆಯವರು ಹಿಡಿದಿರುವುದು ನಿಜವಲ್ಲವೇ ?

† ಶ್ರೀ ವಿ. ಎಲ್. ಪಾಟೀಲ್.—ಅದೇನು 26 ಲಾರಿಯೋ ಏನೋ ಆ ವಿವರಗಳು ನಮಗೆ ಗೊತ್ತಿಲ್ಲ. ನಮಗೆ ಎಷ್ಟು ಜನರು ಮರಗಳನ್ನು ಕೇಳಿದ್ದರೋ ಅವರಿಗೆಲ್ಲಾ ಕೊಟ್ಟಿದ್ದೇವೆ. ನಾವು ಯಾರಿಗೆ ಕೊಟ್ಟಿದ್ದೇವೋ ಅವರಿಗೆ ಆ ಮರದ ಸಾಮಾನುಗಳು ಮುಟ್ಟಿವೆ ಎಂದು ವರದಿಗಳು ಬಂದಿವೆ.

ಶ್ರೀ ಎನ್. ಲೋಕಯ್ಯ ನಾಯಕ್.—ಹರಿಜನ ಗಿರಿಜನರ ಮನೆಗಳನ್ನು ಕಟ್ಟಿಕೊಳ್ಳಲು ಎಷ್ಟು ಜನರಿಗೆ ಮರದ ಸಾಮಾನಿಗೆ ಪರ್ಮಿಟ್ಟನ್ನು ಕೊಡಲಾಗಿದೆಯೋ ಅಷ್ಟು ಜನರು ಮನೆಗಳನ್ನು ಕಟ್ಟಿದ್ದಾರೆಯೇ ? ಹಾಗೆ ನೋಡುವುದಾದರೆ ಅಲ್ಲ ಅವರ ಮನೆಗಳೇ ಇರುವುದಿಲ್ಲ ಎಂಬುದು ನಿಜವೇ ?

ಶ್ರೀ ವಿ. ಎಲ್. ಪಾಟೀಲ್.—ಹಾಗೆ ಎಲ್ಲೆಲ್ಲಿಂದ ಅಪಾದನೆಗಳು ದೂರುಗಳು ಬಂದಿವೆಯೋ ಅವುಗಳನ್ನು ವಿಚಾರಣೆ ಮಾಡಿ ವರದಿ ಮಾಡುವುದಕ್ಕೆ ಇಲಾಖೆಯ ಅಧಿಕಾರಿಗಳಿಗೆ ಕಳುಹಿಸಿದ್ದೇವೆ. ತಮ್ಮ ಕಡೆಯಲ್ಲಿ ದೂರುಗಳೇನಾದರೂ ಇದ್ದರೆ ತಿಳಿಸಿ, ಅವುಗಳನ್ನೂ ವಿಚಾರಣೆ ಮಾಡಿಸುತ್ತೇನೆ.

ಶ್ರೀ ಎನ್. ಎ. ಚನ್ನೇಗೌಡ.—ಸರ್ಕಾರದವರು ಯಾರ್ಯಾರಿಗೆ ಮರದ ಸಾಮಾನಿಗೆ ಪರ್ಮಿಟ್ಟನ್ನು ಮಂಜೂರು ಮಾಡಿದ್ದಾರೋ ಅವರು ಎಲ್ಲಿ ಆ ಮನೆಗಳನ್ನು ಕಟ್ಟಲು ಮರಗಳನ್ನು ಉಪಯೋಗ ಮಾಡಿದ್ದಾರೆಂಬುದನ್ನು ಮಾನ್ಯ ಸಚಿವರು ನೋಡಿದ್ದಾರೆಯೇ ?

ಶ್ರೀ ವಿ. ಎಲ್. ಪಾಟೀಲ್.—ತಾಲ್ಲೂಕು ಬಿ. ಡಿ. ಓ. ಗಳೂ ಮತ್ತು ಸಮಾಜ ಕಲ್ಯಾಣ ಇಲಾಖೆಯ ಇನ್‌ಸ್ಪೆಕ್ಟರುಗಳೂ ಪರಿಶೀಲಿಸಿದ್ದಾರೆ. ತಾವು ಅಂಥ ದೂರುಗಳಿದ್ದರೆ ತಿಳಿಸಿ ವಿಚಾರಣೆ ಮಾಡಿಸುತ್ತೇನೆ.

ಶ್ರೀ ಬಿ. ಎಲ್. ನಾರಾಯಣಸ್ವಾಮಿ.—ಅವರಿಗೆ ಸರ್ಕಾರದವರು ಮನೆಗಳನ್ನು ಕಟ್ಟಿ ಕೊಳ್ಳುವುದಕ್ಕೆ ಮರಮಟ್ಟುಗಳನ್ನು ಕೊಟ್ಟರೂ ಅವರಲ್ಲಿ ಅದನ್ನು ಸದ್ವಿನಿಯೋಗ ಮಾಡಿಕೊಳ್ಳುವುದಕ್ಕೆ ದುಡ್ಡಿಲ್ಲವಿರುವುದೇ ಇದಕ್ಕೆಲ್ಲಾ ಕಾರಣವೆನ್ನುತ್ತೇನೆ. ಅದಕ್ಕೆ ತಾವೇನನ್ನುತ್ತೀರಿ ?

ಶ್ರೀ ವಿ. ಎಲ್. ಪಾಟೀಲ್.—ತಮ್ಮ ಕಡೆ ದೂರುಗಳಿದ್ದರೆ ತಿಳಿಸಿ, ವಿಚಾರಣೆ ಮಾಡಿಸುತ್ತೇನೆ.

ಶ್ರೀ ಜಿ. ರಾಮೇಗೌಡ.—ಆ ಪರ್ಮಿಟ್ಟನ್ನು ಕೊಟ್ಟನಂತರ ಆ ಸಾಮಾನುಗಳನ್ನು ಬಿ.ಡಿ.ಓ. ಮೂಲಕವೇ ಕೊಡುವುದಕ್ಕೆ ಒಂದು ವ್ಯವಸ್ಥೆಮಾಡುತ್ತೀರಾ ?

ಶ್ರೀ ವಿ. ಎಲ್. ಪಾಟೀಲ್.—ಮುಂದಕ್ಕೆ ಈ ಪದ್ಧತಿಯನ್ನು ಬದಲಾವಣೆ ಮಾಡಿ ಅವರಿಗೆ ನೇರವಾಗಿ ಮರಮುಟ್ಟುಗಳನ್ನು ತಾಲ್ಲೂಕಾಭಿವೃದ್ಧಿ ಮಂಡಳಿಯ ಮೂಲಕವೇ ಹಂಚುವಂತೆ ಮಾಡಿನಬೇಕೆಂಬ ಯೋಚನೆ ಸರ್ಕಾರದವರ ಪರಿಶೀಲನೆಯಲ್ಲಿದೆ.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಹರಿಜನ ಗಿರಿಜನರಿಗೆ ಕೊಟ್ಟ ಮರಗಳನ್ನು ಡಿಪೋಗಳಲ್ಲೇ ದುರುಪಯೋಗ ಮಾಡಿರತಕ್ಕ ದಾಖಲೆ ಸಿಕ್ಕುವುದರಿಂದ ಅಂಥವರ ಬಗ್ಗೆ ಕ್ರಮ ಕೈಗೊಳ್ಳುವುದಕ್ಕೆ ಏನು ವ್ಯವಸ್ಥೆಯನ್ನು ಅಥವಾ ಯೋಜನೆಯನ್ನು ಇಟ್ಟು ಕೊಂಡಿದ್ದೀರಿ ?

ಶ್ರೀ ವಿ. ಎಲ್. ಪಾಟೀಲ್.—ಅನೇಕ ಕಡೆಗಳಿಂದ ದೂರುಗಳು ಬಂದಿವೆ. ಅಲ್ಲೆಲ್ಲಾ ವಿಚಾರಣೆಗೆ ಆಜ್ಞೆಮಾಡಿದೆ. ತಮ್ಮಲ್ಲಿ ದೂರುಗಳಿದ್ದರೆ ತಿಳಿಸಿ, ಅವನ್ನೂ ವಿಚಾರಣೆ ಮಾಡಲಾಗತ್ತದೆ.

ಶ್ರೀ ಹಂಜಿ ಶಿವಣ್ಣ.—ಎಲ್ಲಿ ಈ ಹರಿಜನ ಗಿರಿಜನರಿಗೆ ಕೊಡತಕ್ಕ ಪರ್ಮಿಟ್ಟುಗಳನ್ನು ಮಾರಾಟ ಮಾಡತಕ್ಕ ಒಂದು ವ್ಯವಹಾರ ಖಾಯಂ ಆಗಿ ನಡೆಯುತ್ತಿದೆ. ನಾನೇ ತತ್ಸಂಬಂಧದಲ್ಲಿ 40 ಜನರ ಬಗ್ಗೆ ಅಲ್ಲಿನ ಬಿ.ಡಿ.ಓ. ಗೆ ಮತ್ತು ಈ ಇಲಾಖೆಯ ಉಪಮಂತ್ರಿಗಳಿಗೆ ದೂರನ್ನು ಕೊಟ್ಟಿದೆ. ಇಲ್ಲಿಯವರೆಗೆ ಯಾರೂ ಯಾವ ಕ್ರಮವನ್ನೂ ಕೈಗೊಂಡಿಲ್ಲ ಏಕೆ ?

ಶ್ರೀ ವಿ. ಎಲ್. ಪಾಟೀಲ್.—ಆಕ್ಷನ್ ತೆಗೆದುಕೊಂಡಿದ್ದೇವೆ. ನಮಗೆ ಆ ಸಂಬಂಧದಲ್ಲಿ ಇನ್ನೂ ರಿಪೋರ್ಟ್ ಬಂದಿಲ್ಲ.

ಶ್ರೀ ಎಂ. ನಾಗಪ್ಪ.—ಉತ್ತರದಲ್ಲಿ ಇನ್ನೂ ವಿಲೇವಾರಿಯಾಗದ ಅರ್ಜಿಗಳು ಸಾವಿರಾರು ಹಾಗೇ ಉಳಿದಿವೆ. ಕಾರಣವೇನು ? ಪರ್ಮಿಟುಗಳು ದುರುಪಯೋಗವಾಗಿರತಕ್ಕ ಕಡೆ ಚೌಕಸಿ ಮಾಡಿಸುತ್ತೇವೆಂದು ಹೇಳಿದ್ದಾರೆ. ಹಾಗಿದ್ದರೆ ಹಾಗೆ ಕೊಡತಕ್ಕ ಮರಗಳನ್ನು ಎಷ್ಟು ಕಡೆ ಮನೆಗಳಿಗೆ ಉಪಯೋಗ ಮಾಡಿದ್ದಾರೆ, ಎಷ್ಟು ಕಡೆ ದುರುಪಯೋಗ ಮಾಡಿದ್ದಾರೆಂದು ಸರ್ಕಾರಕ್ಕೆ ಪರಿಶೀಲನೆ ಮಾಡಿದ ವರದಿಗಳು ಬಂದಿವೆ ? ಹಾಗೆ ಬಂದಿರತಕ್ಕ ವರದಿಗಳ ಬಗ್ಗೆ ಸರ್ಕಾರದವರು ಏನು ಆಜ್ಞೆಮಾಡಿದ್ದಾರೆ ?

ಶ್ರೀ ವಿ. ಎಲ್. ಪಾಟೀಲ್.—ಎಲ್ಲೆಲ್ಲಿಂದ ದೂರುಗಳು ಬಂದಿದ್ದವೋ ಅವುಗಳನ್ನು ಇರಾಖೆಗೆ ವಿಚಾರಣೆಗಾಗಿ ಕಳುಹಿಸಲಾಗಿದೆ. ಇನ್ನು ಏಕೆ ಅನೇಕ ಅರ್ಜಿಗಳು ವಿಲೇವಾರಿಯಾಗಿಲ್ಲ ಎನ್ನುತಕ್ಕ ಬಗ್ಗೆ ಕೆಲವು ಫಾರ್ಮಾಲಿಟೀಸುಗಳನ್ನು ಕಂಪ್ಲೀಟ್ ಮಾಡಬೇಕು. ಅದನ್ನು ಮಾಡದಿರುವುದರಿಂದ ಅವು ಹಾಗೆ ನಿಂತಿವೆ. ಅವನ್ನು ಕಂಪ್ಲೀಟ್ ಮಾಡಿದ ನಂತರ ಕೊಡಲಾಗುತ್ತದೆ.

Sri B. B. SAYANAK.—Has the Minister received any complaint from any person or from any Taluk Board that these persons have not constructed the House ?

ಶ್ರೀ ವಿ. ಎಲ್. ಪಾಟೀಲ್.—ದೂರುಗಳನ್ನು ಯಾರು ಕೊಟ್ಟರೂ ವಿಚಾರಣೆ ಮಾಡಿಸಲಾಗುತ್ತದೆ.